# ಆ್ಯಪಲ್ ಕ್ರೆಡಿಟ್ ಕಾರ್ಡ್




ಮುನ್ನೆಲೆಗೆ ಬಂದಿರುವ ಡಿಜಿಟಲ್ ಪೇಮೆಂಟ್ ಕ್ಷೇತ್ರಕ್ಕೆ ಆ್ಯಪಲ್ ಕಂಪನಿಯೂ ಈಚೆಗೆ ಕಾಲಿಟ್ಟಿದ್ದು, ಪ್ರಾರಂಭಿಕವಾಗಿ 'ಆ್ಯಪಲ್ ಪೇ ವ್ಯಾಲೆಟ್' ಸೇವೆ ಆರಂಭಿಸಿತ್ತು. ಈಗ ಮೊದಲ ಬಾರಿಗೆ ವರ್ಚುವಲ್ ಕ್ರೆಡಿಟ್ ಕಾರ್ಡ್ ಅನ್ನು ಪರಿಚಯಿಸಿದೆ.

ಇದು ವಿಶಿಷ್ಟ ರೀತಿಯ ಕಾರ್ಡ್. ಇದನ್ನು ಪಡೆಯಲು ಯಾವುದೇ ರೀತಿಯ ಶುಲ್ಕವಿರುವುದಿಲ್ಲ. ಜೊತೆಗೆ ಯಾವುದೇ ಕಾರ್ಡ್ ಸಂಖ್ಯೆ, ಸಿವಿವಿ ಸೆಕ್ಯೂರಿಟಿ ಕೋಡ್, ಕಾರ್ಡಿನ ವ್ಯಾಲಿಡಿಟಿ, ಮುಕ್ತಾಯದ ದಿನಾಂಕ ಅಥವಾ ಸಹಿ ಇಲ್ಲದ ಕಾರ್ಡ್ ಇದಾಗಿದ್ದು, ಮಿಕ್ಕೆಲ್ಲ ಕ್ರೆಡಿಟ್ ಕಾರ್ಡ್‌ಗಳಿಗಿಂತಲೂ ಹೆಚ್ಚು ಸುರಕ್ಷತೆಯನ್ನು ಹೊಂದಿದೆ.

ಪ್ರತಿಷ್ಠಿತ 'ಗೋಲ್ಡ್‌ಮನ್ ಸ್ಯಾಕ್ಸ್' ಎಂಬ ಕಂಪನಿಯು ಆ್ಯಪಲ್ ಕ್ರೆಡಿಟ್ ಕಾರ್ಡ್‌ನ ಸೇವೆ ನೀಡಲಿದ್ದು, ಮಾಸ್ಟರ್‌ಕಾರ್ಡ್ ಮೂಲಕ ಜಾಗತಿಕ ಪೇಮೆಂಟ್ ನೆಟ್‌ವರ್ಕ್ ಸಹ ಬಳಸಲಿದೆ. ಆ್ಯಪಲ್ ಕಾರ್ಡ್ ರಿವಾರ್ಡ್ ಯೋಜನೆಯಡಿ ಗ್ರಾಹಕರಿಗೆ ಪ್ರತಿನಿತ್ಯವೂ ಕನಿಷ್ಠ ಶೇ. 2ರಷ್ಟು ಕ್ಯಾಶ್ ಬ್ಯಾಕ್ ದೊರೆಯಲಿದೆ. ಎಲ್ಲ ರೀತಿಯ ಖರೀದಿಗೂ ಆ್ಯಪಲ್ ಕಾರ್ಡ್ ಬಳಸಬಹುದಾಗಿದೆ.

ಗರಿಷ್ಠ ಭದ್ರತೆ ಮತ್ತು ಸುರಕ್ಷತೆ ಇರುವ ಈ ಕಾರ್ಡ್‌ನಿಂದ ಯಾವುದೇ ರೀತಿ ಗ್ರಾಹಕರ ಖಾಸಗಿತನಕ್ಕೆ ಧಕ್ಕೆಯಾಗದು. ಈ ಕಾರ್ಡ್ ಬಳಸಿ ಏನೇನು ಖರೀದಿಸಲಾಗಿದೆ ಎಂಬಿತ್ಯಾದಿ ವಿವರಗಳು ಸಹ ಆ್ಯಪಲ್ ಕಂಪನಿಯು ಸಂಗ್ರಹಿಸುವುದಿಲ್ಲ.

ಈ ಕಾರ್ಡ್‌ಗೆ ಅಮೆರಿಕದಲ್ಲಿ ಭಾರಿ ಬೇಡಿಕೆ ವ್ಯಕ್ತವಾಗಿದ್ದು, ಶೀಘ್ರವೇ ಇತರ ದೇಶಗಳಿಗೆ ಅದು ಕಾಲಿಡಲಿದೆ. ಈಗಾಗಲೇ ಬಳಕೆಯಲ್ಲಿರುವ ಐಫೋನ್‌ನ ವ್ಯಾಲೆಟ್ ಆ್ಯಪ್ ಮೂಲಕ ಆ್ಯಪಲ್ ಕ್ರೆಡಿಟ್ ಕಾರ್ಡ್‌ಗೆ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿಯಾದ ತಕ್ಷಣವೇ ಕಾರ್ಡ್ ಬಳಕೆಗೆ ಲಭ್ಯ. ಐಫೋನ್ ವ್ಯಾಲೆಟ್‌ನಿಂದಲೇ ಸುಲಭವಾಗಿ ಇದನ್ನು ನಿರ್ವಹಿಸಬಹುದು.

## ವಾಟ್ಸ್‌ಆ್ಯಪ್‌ಗೂ ಬೆರಳಚ್ಚು ಲಾಕ್

ಬಳಕೆದಾರರ ವೈಯಕ್ತಿಕ ಮಾಹಿತಿ ಸುರಕ್ಷತೆಗಾಗಿ ಫೇಸ್‌ಬುಕ್ ಒಡೆತನದ ವಾಟ್ಸ್‌ಆ್ಯಪ್‌ಗೂ ಫಿಂಗರ್‌ಪ್ರಿಂಟ್ ವ್ಯವಸ್ಥೆ ಶೀಘ್ರವೇ ಬರಲಿದೆ.

ವಾಟ್ಸ್‌ಆ್ಯಪ್‌ಗೆ ತನ್ನದೇ ಪ್ರತ್ಯೇಕ ಲಾಕ್ ವ್ಯವಸ್ಥೆ ಇಲ್ಲ. ಥರ್ಡ್ ಪಾರ್ಟಿ ಸೆಕ್ಯುರಿಟಿ ಆ್ಯಪ್‌ಗಳನ್ನು ಬಳಸಿ ವಾಟ್ಸ್‌ಆ್ಯಪ್‌ಗೆ ಲಾಕ್ ವ್ಯವಸ್ಥೆ ಬಳಸುವ ಅವಕಾಶ ಮಾತ್ರ ಇದೆ. ಥರ್ಡ್ ಪಾರ್ಟಿ ಸೆಕ್ಯುರಿಟಿ ಆ್ಯಪ್‌ಗಳಿಗೆ ಪರ್ಯಾಯವಾಗಿ ತನ್ನದೇ ಲಾಕ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ವಾಟ್ಸ್‌ಆ್ಯಪ್ ಸಿದ್ಧತೆ ನಡೆಸಿದೆ.

ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂನಲ್ಲಿ ವಾಟ್ಸ್‌ಆ್ಯಪ್ ಬಳಸುವ ಬಳಕೆದಾರರಿಗೆ ಮಾತ್ರ ಪ್ರಾರಂಭಿಕ ಹಂತದಲ್ಲಿ ಈ ವ್ಯವಸ್ಥೆ ಲಭ್ಯವಾಗಲಿದೆ. ಮುಂದೆ ಎಲ್ಲ ಬಳಕೆದಾರರಿಗೆ ಲಭ್ಯವಾಗಲಿದೆ.




### ಹೊಸ ಆಯ್ಕೆ ಬಳಕೆ ಹೇಗೆ?

ಮೊದಲು ವಾಟ್ಸ್‌ಆ್ಯಪ್ ಬೀಟಾ 2.19.221 ಆವೃತ್ತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಬಳಿಕ ವಾಟ್ಸ್‌ಆ್ಯಪ್ ಸೆಟ್ಟಿಂಗ್ಸ್‌ಗೆ ಹೋಗಿ ಅಕೌಂಟ್ ಆಪ್ಷನ್ ಕ್ಲಿಕ್ಕಿಸಿ ಅಲ್ಲಿ ಕಾಣುವ ಪ್ರೈವೆಸಿ ಆಪ್ಷನ್ ಅನ್ನು ಆಯ್ಕೆ ಮಾಡಿಕೊಳ್ಳಬೇಕು. ನಂತರ ಫಿಂಗರ್‌ಪ್ರಿಂಟ್ ಲಾಕ್ ಫೀಚರ್ ಆಯ್ಕೆ ಮಾಡಿ, ಅದನ್ನು ಎನೇಬಲ್ ಮಾಡಿ, ಫಿಂಗರ್‌ಪ್ರಿಂಟ್ ಅನ್ನು ಸೇರಿಸಿ, ದೃಢೀಕರಿಸಿ. ನಂತರ, ಸ್ವಯಂಚಾಲಿತವಾಗಿ ಲಾಕ್ ಆಯ್ಕೆ ಬಳಸಿ, ಬೇಕಾದ ಸಮಯಕ್ಕೆ ಲಾಕ್ ಸೆಟ್ ಮಾಡಬಹುದು.

## ಮಡಚಬಲ್ಲ 'ಮೋಟೊ'




ಬಹುತೇಕ ಎಲ್ಲ ಮೊಬೈಲ್ ತಯಾರಿಕ ಕಂಪನಿಗಳು ಈಗಾಗಲೇ ಫೋಲ್ಡಬಲ್ (ಮಡಚಬಲ್ಲ) ಸ್ಮಾರ್ಟ್‌ಫೋನ್‌ನ ಹಿಂದೆ ಬಿದ್ದಾಗಿದೆ. ಆ ಸಾಲಿಗೆ ಲೆನವೊ ಕಂಪನಿಯ ಒಡೆತನದಲ್ಲಿರುವ ಮೊಟೊರೊಲಾವು ಸೇರಿದೆ.

2019ರ ಡಿಸೆಂಬರ್ ಅಂತ್ಯದೊಳಗೆ ತನ್ನ ಫೋಲ್ಡಬಲ್ ಸ್ಮಾರ್ಟ್‌ಫೋನ್ ಆದ 'ಮೋಟೊ ರೇಜರ್' ಅನ್ನು ಮಾರುಕಟ್ಟೆಗೆ ತರುವ ಪ್ರಯತ್ನದಲ್ಲಿ ಕಂಪನಿ ತೊಡಗಿದೆ.

ಮೊದಲ ಹಂತದಲ್ಲಿ ಇದು ಅಮೆರಿಕದ ಮಾರುಕಟ್ಟೆಯಲ್ಲಿ ಬಿಡುಗಡೆಯಾಗಲಿದ್ದು, ನಂತರವಷ್ಟೇ ಮಿಕ್ಕೆಲ್ಲ ದೇಶಗಳ ಮಾರುಕಟ್ಟೆ ಪ್ರವೇಶಿಸಲಿದೆ. ಈ ಬಗ್ಗೆ ವರ್ಲ್ಡ್ ಇಂಟಲೆಕ್ಚುವಲ್ ಪ್ರಾಪರ್ಟಿ ಆರ್ಗನೈಸೇಷನ್‌ನಲ್ಲಿ ಪೇಟೆಂಟ್ ಅರ್ಜಿ ಸಲ್ಲಿಸಲಾಗಿದೆ.

ಈ ಫೋನ್‌ನ ಅಂದಾಜು ಬೆಲೆ ₹1,19,000 ಇರಲಿದೆ ಎನ್ನಲಾಗಿದ್ದು, ಕ್ವಾಲ್ಕಂ ಸ್ನ್ಯಾಪ್‌ಡ್ರ್ಯಾಗನ್ 710 ಎಸ್‌ಒಸಿ ಪ್ರೊಸೆಸರ್, 4 ಜಿಬಿ ಅಥವಾ 6 ಜಿಬಿ ರ್‍ಯಾಮ್ ಮತ್ತು 128 ಜಿಬಿ ವರೆಗೆ ಸ್ಟೋರೇಜ್ ಸಾಮರ್ಥ್ಯ ಹೊಂದಿರುವ ನಿರೀಕ್ಷೆಯಿದೆ. 48 ಮೆಗಾಪಿಕ್ಸೆಲ್ ಕ್ಯಾಮೆರಾ, 12 ಮೆಗಾಪಿಕ್ಸೆಲ್ ಫ್ರಂಟ್ ಕ್ಯಾಮೆರಾ ಒಳಗೊಳ್ಳುವ ಸಾಧ್ಯತೆ ಇದೆ.

**ಶಶಿಕುಮಾರ್ ಸಿ.**